ದಿನಾಂಕ : 13-06-2024 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು:1 ರಿಂದ 4, 8, 9,13 ಹಾಗೂ 17 ನೇಆರೋಪಿತರ ಪರ ಶ್ರೀ.ಪಿ.ಎಸ್.ಟಿ ವಕೀಲರಿಂದ**

ನಾನು ಬಿ.ಎ ಪದವಿಧರನಾಗಿರುತ್ತೇನೆ. ನಾನು ಮತ್ತು ನಮ್ಮ ಕುಟುಂಬದವರು ಸುಮಾರು 100 ವರ್ಷಗಳಿಂತ ಹೆಚ್ಚಿನ ಅವಧಿಯಿಂದ ಮುಗಳಖೋಡ ಗ್ರಾಮದಲ್ಲಿ ವಾಸವಾಗಿರುತ್ತೇವೆ ಎಂದರೆ ಸರಿ. ಆರೋಪಿತರ ಪೂರ್ವಜರು ಹಾಗೂ ಆರೋಪಿತರ ಕುಟುಂಬದವರು ಸುಮಾರು 100 ವರ್ಷಗಳಿಂತ ಹೆಚ್ಚಿನ ಅವಧಿಯಿಂದ ಮುಗಳಖೋಡ ಗ್ರಾಮದಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. ಆ ಕಾರಣಕ್ಕೆ ಆರೋಪಿತರಿಗೂ ನಮಗೂ ಪರಿಚಯ ಇರುತ್ತದೆ ಎಂದರೆ ಸರಿ.  ಮುಗಳಖೋಡ ಗ್ರಾಮದ ಬಸ ಸ್ಟ್ಯಾಂಡನಿಂದ ಮುಗಳಖೋಡ ಗ್ರಾಮದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಹಾದು ಹೋಗುವ ರಸ್ತೆಯ ಬಲಗಡೆಗೆ ಸರ್ಕಾರಿ ಕೆರೆ ಗಾಯರಾಣ ಇರುತ್ತದೆ ಎಂದರೆ ಸರಿ.  ಸಿದ್ದರಾಯಮಟ್ಟಿ ಗಾಯರಾಣ ಇದು ಮುಗಳಖೋಡ ಗ್ರಾಮದಿಂದ 2-3 ಕಿ.ಮೀ ದೂರದಲ್ಲಿರುತ್ತದೆ. ಖನದಾಳ ಸೀಮೆಗೆ ಹೊಂದಿಕೊಂಡಿರುವ ಗಾಯರಾಣ ಇದು ಮುಗಳಖೋಡ ಗ್ರಾಮದಿಂದ 5 ಕಿ.ಮೀ ದೂರದಲ್ಲಿರುತ್ತದೆ.  ಕದಮರವರ ಗಾಯರಾಣ ಮುಗಳಖೋಡ ಗ್ರಾಮದ ಕೆರೆಯ ಎದರುಗಡೆ ಇರುತ್ತದೆ.

2. ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ  ಹಾದು ಹೋಗುವ ರಸ್ತೆಯ ಎಡಭಾಗಕ್ಕೆ ಇರುವ ಗಾವಟಾನ ಜಾಗದಲ್ಲಿ ಆರೋಪಿತರ ಮನೆಗಳು ಇರುತ್ತವೆ ಎಂದರೆ ಸರಿ.  ಆದರೆ ಅವರ ಹೆಸರಿನಲ್ಲಿ ಉತಾರ ಇರುವ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.  ಸರ್ವೇ ನಂಬರ 643/ಅ/1 ಜಮೀನು ಗಾಯರಾಣ ಅಥವಾ ಗಾವಟಾನ ಜಾಗದಲ್ಲಿ ಇರುತ್ತದೆ ಎನ್ನುವ ವಕೀಲರ ಪ್ರಶ್ನೆಗೆ ಸಾಕ್ಷಿಯು ಯಾವುದರಲ್ಲಿ ಎಂದು ನಿಖರವಾಗಿ ಗೊತ್ತಿಲ್ಲ ಆದರೆ ಉತಾರವು ನಮ್ಮ ಪೂರ್ವಜರ ಹೆಸರಿನಿಂದ ಇದ್ದು ನಂತರ ನನ್ನ ತಂದೆ, ನನ್ನ ಅಣ್ಣ ಮತ್ತು ನನ್ನ ಹೆಸರಿಗೆ ಆಗಿರುತ್ತದೆ ಎಂದು ನುಡಿಯುತ್ತಾರೆ.

3. ದಿಃ 29.06.2017 ರಂದು ಮುಗಳಖೋಡ ಪುರಸಭೆಯವರು ಘಟನಾ ಸ್ಥಳದಲ್ಲಿ ಕಟ್ಟುತ್ತಿದ್ದ ಕಟ್ಟಡದ ಅನುಮತಿಯನ್ನು ರದ್ದುಪಡಿಸಿದ ವಿಚಾರ ನಿಮಗೆ ಗೊತ್ತಿದಿಯಾ ಅಥವಾ ಇಲ್ಲ ಎನ್ನುವ ವಕೀಲರ ಪ್ರಶ್ನೆಗೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಸ್ವಇಚ್ಛೆಯಿಂದ ಹೇಳುವುದೇನೆಂದರೆ ದಿಃ 26.08.2017 ರಂದು ಘಟನಾ ಸ್ಥಳದಲ್ಲಿ ಕಟ್ಟಡವನ್ನು ಕಟ್ಟಲು ಪ್ರಾರಂಭ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಪುರಸಭೆ ಕಾರ್ಯಾಲಯ ಮುಗಳಖೋಡ ರವರು ಶ್ರೀಮಂತ ನೇಮಣ್ಣ ಬಾಬಣ್ಣವರ ಮತ್ತು ರಾವಸಾಬ ಲಕ್ಷ್ಮಣ ಬಾಬಣ್ಣವರವರಿಗೆ ಕಟ್ಟಡ ಪರವಾನಿಗೆಯನ್ನು ಕೊಟ್ಟಿದ್ದು ರದ್ದು ಮಾಡಿದ ಬಗ್ಗೆ ನೋಟಿಸನ್ನು ನೀಡಿರುತ್ತಾರೆ ಎನ್ನುವ ವಕೀಲರ ಪ್ರಶ್ನೆಗೆ ಸಾಕ್ಷಿಯು ಸದರಿ ವಿಷಯ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪುರಸಭೆ ಕಾರ್ಯಾಲಯ ಮುಗಳಖೋಡ ರವರು ನಮಗೆ ನೋಟಿಸ ಕೊಟ್ಟಿದ್ದರೂ ಸಹ ನಮಗೆ ಮುಟ್ಟಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

4. ಶ್ರೀಮಂತ ನೇಮಣ್ಣ ಬಾಬಣ್ಣವರ ಮತ್ತು ರಾವಸಾಬ ಲಕ್ಷ್ಮಣ ಬಾಬಣ್ಣವರವರು ಕಟ್ಟಡ ಪರವಾನಿಗೆ ನೀಡಿದ್ದನ್ನು ರದ್ದುಗೊಳಿಸಿದ ನಂತರ ಸದರಿ ಆದೇಶವನ್ನು ಮೇಲಾಧಿಕಾರಿಗಳ ಮುಂದೆ ಅಪೀಲು ಮನವಿ ಸಲ್ಲಿಸಿದ ಬಗ್ಗೆ ನಿಮಗೇನಾದರೂ ಗೊತ್ತಿದಿಯಾ ಎನ್ನುವ ವಕೀಲರ ಪ್ರಶ್ನೆಗೆ ಸಾಕ್ಷಿಯು ಲಕ್ಷ್ಮಣ ಹನಮಂತ ಬಾಬಣ್ಣವರ ಇವರಿಗೆ ಮತ್ತೊಂದು ಕಟ್ಟಡ ಪರವಾನಿಗೆಯನ್ನು ಪುರಸಭೆ ಕಾರ್ಯಾಲಯ ಮುಗಳಖೋಡ ರವರು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಲಕ್ಷ್ಮಣ ಹನಮಂತ ಬಾಬಣ್ಣವರ ಯಾವ ತಾರೀಖಿಗೆ ಮತ್ತೊಂದು ಕಟ್ಟಡ ಪರವಾನಿಗೆಯನ್ನು ಕೊಡಬೇಕೆಂದು ಅರ್ಜಿ ಸಲ್ಲಿಸಿದ ದಿನಾಂಕ ಹಾಗೂ ಮತ್ತೊಂದು ಪರವಾನಿಗೆ ನೀಡಿದ ದಿನಾಂಕ ನನಗೆ ನೆನಪಿರುವುದಿಲ್ಲ. ಲಕ್ಷ್ಮಣ ಹನಮಂತ ಬಾಬಣ್ಣವರ ಇವರಿಗೆ ಪುರಸಭೆ ಕಾರ್ಯಾಲಯ ಮುಗಳಖೋಡ ರವರಿಂದ ಕಟ್ಟಡ ಪರವಾನಿಗೆ ಪಡೆದುಕೊಂಡಿರುತ್ತೇವೆ ಆದರೆ ಅದನ್ನು ಪುರಸಭೆ ಮುಂದೆ ಅಥವಾ ನ್ಯಾಯಾಲಯದ ಮುಂದೆ ಹಾಜರುಪಡಿಸಿದ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಪರವಾನಿಗೆಯನ್ನು ನ್ಯಾಯಾಲಯಕ್ಕೆ ಅಥವಾ ಪೋಲಿಸರ ಮುಂದೆ ಹಾಜರುಪಡಿಸಲು ಯಾವುದೇ ಅಡ್ಡಿ ಇರಲಿಲ್ಲ. ಸಾಕ್ಷಿ ಮುಂದುವರೆದು ಹೇಳುವುದೇನೆಂದರೆ ಪರವಾನಿಗೆ ದೊರೆತ ಸಂದರ್ಭದಲ್ಲಿ ಯಾವುದೇ ಪ್ರಕರಣ ಬಾಕಿ ಇರದ

ಕಾರಣ ನ್ಯಾಯಾಲಯದ ಮುಂದೆ ಆಗಲಿ, ಪೋಲಿಸರ ಮುಂದೆ ಆಗಲಿ ಹಾಜರುಪಡಿಸಿರುವುದಿಲ್ಲ ಎಂದು ನುಡಿಯುತ್ತಾರೆ.

5. ಸಿದ್ದರಾಯಮಟ್ಟಿ ಗಾಯರಾಣದಿಂದ ನೀರಲಕೊಡಿ ತೋಟಕ್ಕೆ ಎಷ್ಟು ದೂರವಿರುತ್ತದೆ ಎನ್ನುವ ವಕೀಲರ ಪ್ರಶ್ನೆಗೆ ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾವು ವಾಸವಾಗಿರುವ ಮನೆಗಳು ನೀರಲಕೊಡಿ ತೋಟದ ವ್ಯಾಪ್ತಿಯಲ್ಲಿ ಇರುತ್ತವೆ ಎಂದರೆ ಸರಿ. ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಬಾಕಿ ಇರುವ ಪ್ರಕರಣದ ಸಂಖ್ಯೆ 75/2018 ರಲ್ಲಿ ಇರುವ ಆರೋಪಿ ನಂಬರ 1 ರಿಂದ 13, 23 ರಿಂದ 31 ಮತ್ತು 33 ರವರು ನೀರಲಕೊಡಿ ತೋಟದಲ್ಲಿ ಮನೆ ಮಾಡಿಕೊಂಡು ವಾಸವಾಗಿರುತ್ತಾರೆ ಎನ್ನುವ ವಕೀಲರ ಪ್ರಶ್ನೆಗೆ ಸಾಕ್ಷಿಯು ಸದರಿ ಆರೋಪಿತರು ಬೇರೆ ಬೇರೆ ಕಡೆ ತಮ್ಮ ತಮ್ಮ ಜಮೀನಿನಲ್ಲಿ ವಾಸವಾಗಿರುತ್ತಾರೆ ಎಂದು ನುಡಿಯುತ್ತಾರೆ.

6. ನಮ್ಮ ಊರು ವ್ಯಾಪ್ತಿಯಲ್ಲಿ ಕರಚಗೇರಿ ಎನ್ನುವ ಏರಿಯಾ ಇದ್ದು ಅದರ ಬಾಜುಗೆ ಸರ್ವೇ ನಂಬರ 643 ಇದೆ ಎನ್ನುವ ವಕೀಲರ ಪ್ರಶ್ನೆಗೆ ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಕರಚಗೇರಿ ಏರಿಯ ಆಸುಪಾಸು ಸರ್ವೇ ನಂಬರ 643 ಇರುವ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಯಲ್ಲಮ್ಮನ ಪಾದಗಟ್ಟೆ ಇರುವ ಜಾಗೆ ಸರ್ವೇ ನಂಬರ 643 ಇರುತ್ತದೆ. ಸರ್ಕಾರಿ ಗಾಯರಾಣದ ಸರ್ವೇ ನಂಬರ ಎಷ್ಟು ಎಂದು ನನಗೆ ಗೊತ್ತಿಲ್ಲ. ದಿಃ 26.08.2017 ರಂದು ಘಟನೆ ನಡೆದಿದೆ ಎನ್ನಲಾದ ದಿವಸ ಕಟ್ಟಡ ಪರವಾನಿಗೆ ನನ್ನ ಹೆಸರಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಸಿದ್ದು ಪರಪ್ಪ ಹುಲ್ಲೋಳ್ಳಿ, ಬಾಹುಬಲಿ ಪರಪ್ಪ ಹುಲ್ಲೋಳ್ಳಿ ಎಲ್ಲಿ ಇರುತ್ತಾರೆ ಎಂದು ನನಗೆ ಗೊತ್ತಿಲ್ಲ. ಆದರೆ ರವಿ ಭೂಪಾಲ ಹುಲ್ಲೋಳ್ಳಿ ಹಾಗೂ ಸಿದ್ದು ಕಲ್ಲಪ್ಪ ಹುಲ್ಲೋಳ್ಳಿ ಇವರು ಹುಲ್ಲೋಳ್ಳಿ ತೋಟದಲ್ಲಿ ವಾಸವಾಗಿರುತ್ತಾರೆ.

7. ನೀರಲಕೊಡಿ ತೋಟದಿಂದ ಘಟನಾ ಸ್ಥಳವು 2.5 ಕಿ.ಮೀ ದೂರದಲ್ಲಿರುತ್ತದೆ. ನಮ್ಮ ಊರಲ್ಲಿ ಮೊದಲು ನನ್ನ ತಂದೆಯ ಮತ್ತು ನಮ್ಮ ಚಿಕ್ಕಪ್ಪನ ಕುಟುಂಬದವರ ಪೈಕಿ ನನ್ನ ತಂದೆಯ ಹೆಸರಿನಲ್ಲಿ ಒಟ್ಟು 19 ಎಕರೆ 20 ಗುಂಟೆ ಜಮೀನು ಇದ್ದು, ನನ್ನ ತಂದೆ ತೀರಿಕೊಂಡ ನಂತರ

ಸದರಿ ಜಮೀನು ನನ್ನ ಅಣ್ಣ, ನನ್ನ ಹೆಸರಿಗೆ ಹಾಗೂ ನಮ್ಮ ಚಿಕ್ಕಪ್ಪನ ಮಕ್ಕಳ ಹೆಸರಿನಲ್ಲಿ ಜಮೀನು ವರ್ಗಾವಣೆ ಆಗಿರುತ್ತದೆ. ನಮ್ಮೊಂದಿಗೆ ಆರೋಪಿತರಾಗಿರುವವರ ಪೈಕಿ ಕೆಲವೊಬ್ಬರ ಹೆಸರಿನಲ್ಲಿ ಹೆಚ್ಚಿನ ಜಮೀನು ಇರುತ್ತದೆ ಎಂದರೆ ಸರಿ. ನಮ್ಮ ಜಮೀನಿನಲ್ಲಿ ಮುಗಳಖೋಡದ ಜನ ಕೂಲಿ ಕೆಲಸಕ್ಕೆ ಬರುವುದಿಲ್ಲ. ಮುಗಳಖೋಡದವರಾದಂತಹ ಮಲ್ಲು ಲಕ್ಷ್ಮಣ ಕುರಾಡೆ ಹಾಗೂ ಮಿಲನ ಬಾಬು ದೇವನ್ನವರವರ ಪರಿಚಯ ಇರುತ್ತದೆ. ಈ ಮೇಲೆ ಹೇಳಿದ ವ್ಯಕ್ತಿಗಳು ನಮ್ಮ ಜಮೀನಿನಲ್ಲಿ ಪಗಾರದಂತೆ ಕೆಲಸ ಮಾಡಲು ಬರುವುದಿಲ್ಲ. ನಮ್ಮ ಜಮೀನಿನಲ್ಲಿ ಮುಗಳಖೋಡದ ಜನ ಕೂಲಿ ಕೆಲಸಕ್ಕೆ ಬರುತ್ತಿದ್ದರೂ ಸಹ ಬರುತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

8. ನಮ್ಮ ಜಮೀನಿನಲ್ಲಿ ಹಾಗೂ ಇತರೆ ಆರೋಪಿತರ ಜಮೀನಿನಲ್ಲಿ ಕೆಲಸ ಮಾಡಲು ಬರುತ್ತಿದ್ದ ಕೂಲಿ ಕೆಲಸಗಾರರನ್ನು ದಿಃ 26.08.2017 ರಂದು ಕಟ್ಟಡ ಕಟ್ಟುವ ಸ್ಥಳಕ್ಕೆ ಕರೆದುಕೊಂಡು ಹೋಗಿದ್ದೆ ಎಂದರೆ ಸರಿಯಲ್ಲ. ದಿಃ 26.08.2017 ರಂದು ಘಟನಾ ಸ್ಥಳಕ್ಕೆ ಬೆಳಗ್ಗೆ 09.00 ಗಂಟೆಗೆ ಹೋಗಿರುತ್ತೇವೆ. ಹೋಗಿ ಜಾಗದಲ್ಲಿದ್ದಂತಹ ಕಸಕಡ್ಡಿಗಳನ್ನು ಸ್ವಚ್ಚ ಮಾಡಲು ಪ್ರಾರಂಭಮಾಡಿರುತ್ತೇವೆ. ಮುಂಜಾನೆ 9.00 ಗಂಟೆಯಿಂದ 10.30 ರವರೆಗೆ ಕಸಕಡ್ಡಿಯನ್ನು ಸ್ವಚ್ಚ ಮಾಡಿರುತ್ತೇವೆ. ಆ ದಿನ 11.00 ಗಂಟೆ ಸುಮಾರಿಗೆ ಪುರಸಭೆ ಮುಖ್ಯಾಧಿಕಾರಿಗಳು ಮತ್ತು ಆಗಿನ ಪುರಸಭೆ ಅಧ್ಯಕ್ಷರು ನಿಮ್ಮ ಕಟ್ಟಡ ಪರವಾನಿಗೆ ರದ್ದಾಗಿದೆ ಎಂದು ತಿಳಿಸಲು ಬಂದಿದ್ದರು ಎಂದರೆ ಸರಿ. ಸದರಿ ಪುರಸಭೆ ಮುಖ್ಯಾಧಿಕಾರಿಗಳು ಮತ್ತು ಆಗಿನ ಪುರಸಭೆ ಅಧ್ಯಕ್ಷರನ್ನು ಈ ಪ್ರಕರಣದ ಆರೋಪಿತರು, ಸಾಕ್ಷಿದಾರರು ಹಾಗೂ ಮಾದಿಗ ಸಮಾಜದ ಹಿರಿಯರು ಕೂಡಿ ಘಟನಾ ಸ್ಥಳಕ್ಕೆ ಕರೆದುಕೊಂಡು ಬಂದಿದ್ದರು ಎಂದರೆ ಸರಿ.

9. ಸದರಿಯವರು ಪುರಸಭೆ ಅಧಿಕಾರಿಗಳನ್ನು ಯಾವ ಕಾರಣಕ್ಕೆ ಘಟನಾ ಸ್ಥಳಕ್ಕೆ ಕರೆದುಕೊಂಡು ಬಂದಿದ್ದರು ಎಂದು ನಮಗೆ ಗೊತ್ತಾಗಿತ್ತು ಎಂದರೆ ಸರಿಯಲ್ಲ. ಕಟ್ಟಡ ಪರವಾನಿಗೆ ರದ್ದಾಗಿದ್ದರಿಂದ ಸದರಿ ಸ್ಥಳದಲ್ಲಿ ಕಟ್ಟಡ ಕಟ್ಟಬಾರದೆಂದು ತಿಳಿಸಲು ಪುರಸಭೆ ಮುಖ್ಯಾಧಿಕಾರಿಗಳು ಮತ್ತು ಆಗಿನ ಪುರಸಭೆ ಅಧ್ಯಕ್ಷರನ್ನು ಮಾದಿಗ ಸಮಾಜದ ಹಿರಿಯರು

ಕರೆದುಕೊಂಡ ಬಂದ ವಿಷಯ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಪುರಸಭೆ ಮುಖ್ಯಾಧಿಕಾರಿಗಳು ಮತ್ತು ಆಗಿನ ಪುರಸಭೆ ಅಧ್ಯಕ್ಷರು ಕಟ್ಟಡ ಪರವಾನಿಗೆ ರದ್ದಾಗಿದೆ ಎಂದು ನೀಡಲು ಹೋದ ನೋಟಿಸನ್ನು ಮುದ್ದಾಮ ತಿರಸ್ಕಾರ ಮಾಡಿದ್ದು, ಆದ ಕಾರಣ ನಿಮಗೆ ಅಂಚೆ ಮುಖಾಂತರ ಕಳುಹಿಸಿರುತ್ತೇವೆ ಎಂದು ಪುರಸಭೆ  ಮುಖ್ಯಾಧಿಕಾರಿಗಳು ಮತ್ತು ಆಗಿನ ಪುರಸಭೆ ಅಧ್ಯಕ್ಷರು  ಹೇಳುತ್ತಾರೆ ಎನ್ನುವ ವಕೀಲರ ಪ್ರಶ್ನೆಗೆ ಸಾಕ್ಷಿಯು ಸರಿಯಲ್ಲ ಎಂದು ನುಡಿಯುತ್ತಾರೆ.

10. ಪುರಸಭೆ  ಮುಖ್ಯಾಧಿಕಾರಿಗಳು ಮತ್ತು ಆಗಿನ ಪುರಸಭೆ ಅಧ್ಯಕ್ಷರು ನಿಮ್ಮ ಕಟ್ಟಡ ಪರವಾನಿಗೆ  ರದ್ದಾಗಿದೆ ಆದ ಕಾರಣ ಸದರಿ ಸ್ಥಳದಲ್ಲಿ ಕಟ್ಟಡ ಕಟ್ಟಬೇಡಿ ಎಂದು ತಿಳಿಸಿದ್ದರಿಂದ ನಮ್ಮ ಮತ್ತು ಪುರಸಭೆ  ಮುಖ್ಯಾಧಿಕಾರಿಗಳು ಮತ್ತು ಆಗಿನ ಪುರಸಭೆ ಅಧ್ಯಕ್ಷರ ಮಧ್ಯೆ ವಾಗ್ವಾದ ನಡೆದಿತ್ತು ಆದ ಕಾರಣ ಅವರ ಮೇಲೆ ನಾವು ಸಿಟ್ಟಾಗಿದ್ದೇವು ಎಂದರೆ ಸರಿಯಲ್ಲ.  ಅದೇ ಸಿಟ್ಟಿನಿಂದ ನಾವೆಲ್ಲ ಸೇರಿ ಮಾದಿಗ ಸಮಾಜದವರ ಮೇಲೆ ಸಿಟ್ಟಾಗಿ ಅವರ ಮೇಲೆ ಕಟ್ಟಿಗೆಯಿಂದ, ಕಬ್ಬಿಣದ ರಾಡ್ ಮತ್ತು ಕಲ್ಲುಗಳನ್ನು ಒಗೆದು ಗಾಯಗೊಳಿಸಿರುತ್ತೇವೆ ಎಂದರೆ ಸರಿಯಲ್ಲ.  ಈ ಪ್ರಕರಣದ 1 ನೇ ಆರೋಪಿ ಇತನಿಗೆ ರಾವಸಾಬ ಲಕ್ಷ್ಮಣ ಬಾಬಣ್ಣವರ ಕಲ್ಲಿನಿಂದ ಒಗೆದಿದ್ದರಿಂದ ಸದರಿಯವರಿಗೆ ಬಹಳ ಪಟ್ಟಾಗಿತ್ತು ಎಂದರೆ ಸರಿಯಲ್ಲ.   ದಿಃ 27.08.2017 ರಂದು ಪೋಲಿಸರ ಮುಂದೆ ನೀಡಿದ ಹೇಳಿಕೆಯಲ್ಲಿ  ಘಟನಾ ಸ್ಥಳದ ಪೂಜೆಯ ಸಂದರ್ಭದಲ್ಲಿ ಬಾಹುಬಲಿ ಹುಲ್ಲೋಳ್ಳಿ ಮತ್ತು ಅವರ ಸಂಬಂಧಿಕರನ್ನು ಕರೆಸಿದ್ದೇವು ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ  ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ಆರೋಪಿತರ ಪರ ವಕೀಲರ ಕೋರಿಕೆಯ ಮೇರೆಗೆ ನಿಡಿಃ1 ಎಂದು ಗುರುತಿಸಲಾಯಿತು.  ಅಲ್ಲೇ ನಾವು ಪೂಜೆ ಮಾಡಿ ಜಾಗ ಸ್ವಚ್ಛ ಮಾಡುತ್ತಿದ್ದೇವು ಆಗ ಬಾಹುಬಲಿ ಹುಲ್ಲೋಳ್ಳಿ ಮತ್ತು ಅವರ ಸಂಬಂಧಿಕರು ಕಟ್ಟಡ ಕಟ್ಟುವ ಜಾಗೆಯ ಉತ್ತರ ಬದಿಗೆ ಕುಳಿತಿದ್ದರು ಎಂದು ಪೋಲಿಸರ ಮುಂದೆ ಹೇಳಿಕೆ ನೀಡಿರುವುದಿಲ್ಲ. ಸದರಿ ಭಾಗವನ್ನು ನಿಡಿಃ1 ಎಂದು ಗುರುತಿಸಲಾಯಿತು.  ಆ ಸಂದರ್ಭದಲ್ಲಿ ಸಿದ್ದು ಪರಪ್ಪ ಹುಲ್ಲೋಳ್ಳಿ ಸಹ  ಘಟನಾ ಸ್ಥಳದಲ್ಲಿ ಹಾಜರಿದ್ದರು ಎಂದರೆ ಸರಿಯಲ್ಲ.

ಈ ಹಂತದಲ್ಲಿ ಆರೋಪಿತರ ಪರ ವಕೀಲರು ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಚೆನ್ನಪ್ಪ ಗೌಡ)
3 ನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು, ಬೆಳಗಾವಿ.